ಬಿಟ್ಟು ಹೇಳುತ್ತಿರಲಿಲ್ಲ.

ಸಾಮಾನ್ಯವಾಗಿ ನಾವು ಗಿರೀಶರ ಮನೆಯಲ್ಲಿ ಕೂಡುತ್ತಿದ್ದೆವು. ನಂತರದ ದಿನಗಳಲ್ಲಿ ಒಮ್ಮೊಮ್ಮೆ ಅಟ್ಟದ ಮೇಲೆ, ಅಪ್ಪಣ್ಣ ದೇಸಾಯರ ಮನೆಯಲ್ಲಿ, ನನ್ನ ಅಥವಾ ಶಫಿಯ ಆಗಿನ ಮಣಕಿಲ್ಲಾದ ಮನೆಯಲ್ಲಿ ಕೂಡುತ್ತಿದ್ದೆವು. ತಾವು ಸಂಪರ್ಕ ಹೊಂದಿದ ಚಿತ್ರಜಗತ್ತಿನ ಅನೇಕ, ಸಂಗತಿಗಳನ್ನು, ವ್ಯಕ್ತಿತ್ವಗಳನ್ನು ಪರೋಕ್ಷವಾಗಿ ಧಾರವಾಡಕ್ಕೆ ಪರಿಚಯಿಸಿದ್ದು ಗಿರೀಶರೇ. ಅವರು ತಮಗೆ ಸಂಬಂಧಪಟ್ಟ ಚಿತ್ರಗಳನ್ನು ಮಾತ್ರ ತರಿಸಬೇಕು ಎಂಬ ಸಂಕುಚಿತ ಭಾವವನ್ನು ಎಂದೂ ಹೊಂದಿರಲಿಲ್ಲ. ಮುಂಬಯಿ ಮತ್ತು ಮದ್ರಾಸದಲ್ಲಿ ತಾವು ಕಂಡ, ಅನುಭವಿಸಿದ ಚಲನಚಿತ್ರ ಜಗತ್ತನ್ನು ತಮ್ಮ ಧಾರವಾಡಕ್ಕೂ ತೋರಿಸುವ ಪ್ರಬಲ ಆಕಾಂಕ್ಷೆ ಅವರಿಗಿತ್ತು. ಪ್ರಪಂಚದ ಎಲ್ಲ ದೇಶಗಳ, ಭಾಷೆಗಳ ಚಿತ್ರಗಳನ್ನು ತೋರಿಸುವ ಸಂದರ್ಭದಲ್ಲಿ ನೋಡುಗರ ಅನುಕೂಲಕ್ಕಾಗಿ ಪುಟ್ಟ ಪರಿಚಯ ಪತ್ರಗಳನ್ನು ವಿತರಿಸುವ ಪರಿಪಾಟಿಯನ್ನೂ ಹುಟ್ಟುಹಾಕಿದರು. ನಾವು ಸದಸ್ಯರಿಗೆ ಪತ್ರ ಹಾಕಿ ಮೊದಲೇ ಚಿತ್ರ, ಇತರ ವಿವರಗಳನ್ನು ಕಳಿಸಿರುತ್ತಿದ್ದೆವು. ಸಾಧ್ಯವಿದ್ದಷ್ಟು ಸಲ ಸ್ವತಃ ಗಿರೀಶರೂ ನಮ್ಮ ಜೊತೆ ಕಳೆಯುತ್ತಿದ್ದರು. ಅಂಥ ಹೊತ್ತಿನಲ್ಲಿ ಗಿರೀಶರ ಮನೆ ನಮ್ಮೆಲ್ಲರ ಮನೆಯೇ ಆಗಿರುತ್ತಿತ್ತು. ತಮಗೆ ಇಷ್ಟದ ಮೃದುಪಾನದ ಜೊತೆಗೆ, ಇತರ ಮಿತ್ರರಿಗೆ ಬೇಕಿದ್ದ ಮಧುಪಾನ, ಭೋಜನದ ವ್ಯವಸ್ಥೆಯೂ ನಡೆದಿರುತ್ತಿತ್ತು. ಇದರ ಎಲ್ಲ ವೆಚ್ಚ, ವ್ಯವಸ್ಥೆ, ಆಯೋಜನೆಯನ್ನು ನಮ್ಮ ಅಬ್ದುಲ್ ಮತ್ತು ಮನೆಯಲ್ಲಿಯೇ ಇರುತ್ತಿದ್ದ ಶಿರಸಿ ಮೂಲದ ಮಂಜುನ ನೆರವಿನಿಂದ ಗಿರೀಶ ತಾವೇ ಮಾಡಿರುತ್ತಿದ್ದರು. ಮನೆಯಲ್ಲಿದ್ದ ಬಾಬಾ, ಆಯಿ ಎಂದೂ ಮಗನ ಯಾವ ಚಟುವಟಿಕೆಗೂ ಅಡ್ಡಿ ಮಾಡಲಿಲ್ಲ. ಅಂಥ ಸ್ವತಂತ್ರ ಮನೋಭಾವವನ್ನು ಮನೆಯ ಎಲ್ಲರೂ ರೂಢಿಸಿಕೊಂಡಿದ್ದರು. ಕೊನೆಯಲ್ಲಿ ಮನೆಯ ಹಿಂಭಾಗದಲ್ಲಿದ್ದ ಊಟದ ಟೇಬಲ್ ಅಥವಾ ನಾವು ಚೆದುರಿ ಕುಳಿತಿರುತ್ತಿದ್ದ ಕಡೆಗೆ ಸ್ವತಃ ಗಿರೀಶರೇ ಓಡಾಡುತ್ತ ಸಾಮಗ್ರಿ ಸರಬರಾಜು ಮಾಡುತ್ತಿದ್ದುದು ಸಹ ಅವರ ಸರಳ ನಡೆಗೆ ದ್ಯೋತಕವಾಗಿತ್ತು. ನಿರಂತರ ಸಾಗಿದ ಹರಟೆಯ ಮಧ್ಯದಲ್ಲಿ ಆಗಾಗ ಗಿರೀಶ ಹಾರಿಸುವ ಹಾಸ್ಯ ಚಟಾಕಿ ಅಥವಾ ತಮ್ಮ ವೈಶಿಷ್ಟ್ಯಪೂರ್ಣ ಅನುಭವಗಳ ನಿರೂಪಣೆ ಸಹ ನಮಗೆ ಸ್ವಾದಿಷ್ಟ ರಂಜಕ ಭೋಜನದ ಭಾಗವೇ ಆಗಿರುತ್ತಿತ್ತು.

ಚಿತ್ರಾ ಫಿಲ್ಮ್ ಸೊಸೈಟಿಯಂತೆ 'ಧಾರವಾಡ ಕಲಾ ಕೇಂದ್ರ'ವನ್ನೂ ಗಿರೀಶ ಹುಟ್ಟು ಹಾಕಿದ್ದರು. ಮುಂಬಯಿ, ಭೋಪಾಲ, ಬೆಂಗಳೂರು ಮುಂತಾದ ಕಡೆಯಿಂದ ಸುಪ್ರಸಿದ್ಧ ನಾಟಕ ತಂಡ, ಸಂಗೀತ ಕಲಾವಿದರು ಮುಂತಾದವರನ್ನು ಆಹ್ವಾನಿಸುತ್ತಿದ್ದರು. ಅವರ ಊಟ, ವಸತಿ, ಸಂಭಾವನೆ, ಸಭಾಂಗಣ ಮುಂತಾದ ಎಲ್ಲ ಭಾರವನ್ನು ಗ್ರಂಥಮಾಲೆಯ ಸಹಕಾರದೊಂದಿಗೆ ನಿರ್ವಹಿಸುತ್ತಿದ್ದರು. ಸದಸ್ಯರು ಕೊಡುವ ವಂತಿಗೆಯಿಂದ ವೆಚ್ಚ ನಿರ್ವಹಿಸುವುದು ಕಷ್ಟವಾಗುತ್ತಿತ್ತು. ಬಂದ ಅತಿಥಿಗಳ ಜೊತೆಗೆ ಚರ್ಚೆ ಇಟ್ಟುಕೊಳ್ಳುವುದನ್ನು ರೂಢಿಸಿದರು. ಗಿರೀಶರ ವ್ಯಸ್ತತೆಯ ಕಾರಣದಿಂದಾಗಿ ನಂತರದ ದಿನಗಳಲ್ಲಿ ಅದು ಮುಂದುವರಿಯಲಿಲ್ಲ.

***

ಗಿರೀಶ ಮುಂಬಯಿ ಅಥವಾ ಬೆಂಗಳೂರಿನಿಂದ ಬರುವ ಹೊತ್ತಿಗೆ, ಮನೆಯಲ್ಲಿದ್ದ ಅವರ ಬಜಾಜ್ ಸ್ಕೂಟರ್, ತೊಳೆದು ಬಳಿದು ಸಿದ್ಧಗೊಂಡಿರುತ್ತಿತ್ತು. ಧಾರವಾಡದ ತುಂಬ ಸ್ಕೂಟರ್ ಹತ್ತಿಕೊಂಡು ಅವರು ಹೋಗುತ್ತಿದ್ದರೆ ನಮ್ಮ ಜನ ಕುತೂಹಲದಿಂದ ನೋಡಿ ನಲಿಯುತ್ತಿದ್ದರು. ಬರಬರುತ್ತ ಗಿರೀಶರ ಜನಪ್ರಿಯತೆ, ಫಿಲ್ಮ್ ನಂಟು ಹೆಚ್ಚಿದ ನಂತರ ಅವರು ಒಂದು ಕಾಯಂ ಟ್ಯಾಕ್ಸಿಯನ್ನು ಬಳಸತೊಡಗಿದ್ದರು. ವಿಮಾನ ನಿಲ್ದಾಣ ಇನ್ನೂ ಆಗಿರದಿದ್ದ ಆ ದಿನಗಳಲ್ಲಿ, ಟ್ರೇನಿನಲ್ಲಿಯೇ ಬರುತ್ತಿದ್ದ ಅವರು ಹುಬ್ಬಳ್ಳಿಯಲ್ಲಿಯೇ ಇಳಿಯುತ್ತಿದ್ದರು. ಮನೆಯ ಆಪ್ತ ಹುಡುಗ ಟ್ಯಾಕ್ಸಿ ತೆಗೆದುಕೊಂಡು ಹೋಗಿ ಅಲ್ಲಿಂದಲೇ ಕರೆತರುತ್ತಿದ್ದ.

ಧಾರವಾಡಕ್ಕೆ ಬಂದ ಕೂಡಲೇ ಅತ್ಯಂತ ಪ್ರೀತಿಯಿಂದ ಗ್ರಂಥಮಾಲೆಗೆ, ಶಫಿಗೆ, ನನಗೆ ಫೋನ್ ಮಾಡುತ್ತಿದ್ದರು. ನಮಗೆ ತಮ್ಮ ಕಾರ್ಯಕ್ರಮಗಳನ್ನು ತಿಳಿಸಿ, ಮನೆಗೆ ಬರುವ ಸಮಯ ತಿಳಿಸುತ್ತಿದ್ದರು. 2–3 ಸಲ ನಮ್ಮ ಮನೆಯಲ್ಲಿ ಬಂದು ತಮಗೆ ಇಷ್ಟವಾದ ಜೋಳದ ರೊಟ್ಟಿ, ಜುಣಕದ ವಡಿ, ಎಣಗಾಯಿ ಪಲ್ಲೆ, ಗುರೆಳ್ಳು ಚಟ್ನಿ ಮೊಸರು ಹಾಕಿಸಿಕೊಂಡು ಉಂಡದ್ದು ನೆನಪಿದೆ. ಹೀಗೆ ತಮ್ಮ ಆಪ್ತ ಮಿತ್ರರ ಮನೆಗಳಲ್ಲಿ ಇಂಥ